# ವಾರ್ಡ್ ಸಭೆ ಸಂಖ್ಯೆ.12

ದಿನಾಂಕ: 20.03.2021 ರಂದು ಸಮಯ ಬೆಳಿಗ್ಗೆ 10:30 ಗಂಟೆಗೆ ವಾರ್ಡ್.ಸಂಖ್ಯೆ.44 ಮಾರಪ್ಪನಪಾಳ್ಯ ವಾರ್ಡ್ ಕಛೇರಿಯಲ್ಲಿ ವಾರ್ಡ್ ಕಮಿಟಿ ಸಭೆಯನ್ನು ಮಾನ್ಯ ನೋಡಲ್ ಅಧಿಕಾರಿ (ಅಧ್ಯಕ್ಷರು) ರವರು ಮತ್ತು ವಾರ್ಡ್ ಅಭಿಯಂತರರು (ಕಾರ್ಯದರ್ಶಿಗಳು) ಅಧ್ಯಕ್ಷತೆಯಲ್ಲಿ ಕರೆಯಲಾಯಿತು.

## ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳು

1. ಶ್ರೀಮತಿ ಕೆ ಸ್ವಯಂಪ್ರಭಾ, ಅದೀಕ್ಷಕ ಅಭಿಯಂತರರು (ಪಶ್ಚಿಮ) ವಲಯ (**ಅಧ್ಯಕ್ಷರು**)
2. ಶ್ರೀ. ಧನಂಜಯ ಜಿ.ಟಿ ಸಹಾಯಕ ಅಭಿಯಂತರರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ. (**ಕಾರ್ಯದರ್ಶಿ**)
3. ಶ್ರೀ ಮಹದೇವ ಎಂ ಸದಸ್ಯರು.
4. ಶ್ರೀ ಜಯಪಾಲ್ ಸದಸ್ಯರು.
5. ಶ್ರೀ ವೈ.ಆರ್ ವೆಂಕಟೇಶ್ ಸದಸ್ಯರು.
6. ಶ್ರೀಮತಿ ಪ್ರೇಮ ಸದಸ್ಯರು.
7. ಶ್ರೀಮತಿ ಮಹಾಲಕ್ಷ್ಮೀ ಸದಸ್ಯರು.
8. ಶ್ರೀ ಬಿ.ಆರ್ ಪುಟ್ಟಸ್ವಾಮಿ ಸದಸ್ಯರು.
9. ಶ್ರೀ ವೆಂಕಟೇಶ್ ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
10. ಶ್ರೀ ಛಾಯಾಪತಿ ಎಂ ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ.44 ಮಾರಪ್ಪನಪಾಳ್ಯ.
11. ಶ್ರೀ ಜಿ.ಕೆ ವೆಂಕಟೇಶಯ್ಯ ಕೆಲಸ ಪರಿವೀಕ್ಷಕರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
12. ಶ್ರೀ ಸೋಮನಾಥ್ ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ .
13. ಶ್ರೀ ದಿನೇಶ್ ಕುಮಾರ್ ಸಹಾಯಕ ಅಭಿಯಂತರರು, ಬೆಸ್ಕಾಂ ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ
14. ಶ್ರೀ ಮಲ್ಲಯ್ಯ ವಲಯ ಅರಣ್ಯಾ ಸಂರಕ್ಷಣ ಇಲಾಖೆ,
15. ಶ್ರೀ ಬಾಸ್ಕರ್ ಕಂದಾಯ ವಸೂಲಿಗಾರರು, ವಾರ್ಡ್ ಸಂಖ್ಯೆ.44 ಮಾರಪ್ಪನಪಾಳ್ಯ.
16. ಶ್ರೀ ನಂದಿನಿ ಲೇಔಟ್ ಪೋಲೀಸ್ ಅಧಿಕಾರಿ, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
17. ಶ್ರೀ ಮಹಾಲಕ್ಷ್ಮೀಲೇಔಟ್ ಪೋಲೀಸ್ ಅಧಿಕಾರಿ, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
18. ಶ್ರೀ ದೇವಣ್ಣ ಮಾರ್ಷಲ್ ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.

ಶ್ರೀ ಧನಂಜಯ ಜಿ.ಟಿ ಕಾರ್ಯದರ್ಶಿಗಳು ಮಾನ್ಯ ಅಧ್ಯಕ್ಷರನ್ನು, ಸಭೆಯಲ್ಲಿ ಹಾಜರಿದ್ದ ಇತರೆ ಸದಸ್ಯರನ್ನು, ಅಧಿಕಾರಿಗಳನ್ನು ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಲಾಯಿತು.

1. ಕಾರ್ಯದರ್ಶಿಗಳು ಹಿಂದಿನ ಸಭೆಯ ನಡವಳಿಗಳನ್ನು ಸಭೆಯಲ್ಲಿ ಹಾಜರಿದ್ದ ಸದಸ್ಯರಿಗೆ, ಅಧಿಕಾರಿಗಳಿಗೆ ಓದಿ ತಿಳಿಸಿದರು.
2. ಮಾನ್ಯ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಸಾರ್ವಜನಿಕರ ಸಮಸ್ಯೆಗಳಿಗೆ ಮೊದಲ ಆದ್ಯತೆ ನೀಡಿ ಸಮಸ್ಯೆಯನ್ನು ತಿಳಿಸುವಂತೆ ಸಾರ್ವಜನಿಕರಿಗೆ ಹೇಳಿದರು.
3. ಸಾರ್ವಜನಿಕರು 4ನೇ ಅಡ್ಡರಸ್ತೆ, ಮುನೇಶ್ವರ ದೇವಸ್ಥಾನದ ಹತ್ತಿರ, ಶನಿಮಹಾತ್ಮ ದೇವಸ್ಥಾನದ ಹತ್ತಿರ ಹಾಗೂ 10ನೇ ಮುಖ್ಯರಸ್ತೆ, ಶಂಕರನಗರದಲ್ಲಿ ನೀರಿನ ಸಮಸ್ಯೆ ಇದೆ ಹಾಗೂ ನೀರಿನ ವೇಗ ಕಡಿಮೆ ಇರುತ್ತದೆ ಹಾಗೂ ಕಡಿಮೆ ಸಮಯ ನೀರನ್ನು ಬಿಡುತ್ತಿರುತ್ತಾರೆ ಎಂದು ತಿಳಿಸಿದರು. ಇದಕ್ಕೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳು ಕೆಲವು ಸ್ಥಳಗಳಲ್ಲಿ ಪೈಪ್ ಒಡೆದುಹೋಗಿ ನೀರು ಸೋರಿಕೆಯಾಗುತ್ತಿರುತ್ತದೆ ಆದ್ದರಿಂದ ನೀರಿನ ವೇಗ ಕಡಿಮೆ ಆಗಿರುತ್ತದೆ ಹಾಗೂ 3 ದಿನಗಳಿಂದ ನೀರು ಸೋರಿಕೆಯಾಗುತ್ತಿರುವ ಸ್ಥಳಗಳನ್ನು ಪತ್ತೆಹಚ್ಚಲಾಗುತ್ತಿದ್ದು, ನೀರಿನ ಸಮಸ್ಯೆಗಳನ್ನು ಪರಿಹರಿಸಲಾಗುವುದು ಎಂದು ತಿಳಿಸಿದರು

Scanned with CamScanner

4. ಮಾನ್ಯ ಅಧ್ಯಕ್ಷರು, ಕಾರ್ಯದರ್ಶಿಗಳು, ಸಭೆಯಲ್ಲಿ ಹಾಜರಿದ್ದ ಸದಸ್ಯರು ಹಾಗೂ ಸಂಬಂದಪಟ್ಟ ಅಧಿಕಾರಿಗಳು ವಾರ್ಡ್‌ನಲ್ಲಿ ನೀರಿನ ಸಮಸ್ಯೆ ಇರುವ ಸ್ಥಳಗಳಿಗೆ ಬೇಟಿ ನೀಡಿ ಸ್ಥಳಪರಿಶೀಲಿಸಲು ತೀರ್ಮಾನಿಸಿದರು.

5. ಕಾರ್ಯದರ್ಶಿಗಳು ಬೆಸ್ಕಾಂ ಅಧಿಕಾರಿಗಳಿಗೆ ತಮ್ಮ ಇಲಾಖೆಯ ವತಿಯಿಂದ ರಸ್ತೆ ಅಗೆತ ಮಾಡಿರುತ್ತೀರಿ ಕೆಲವು ಸ್ಥಳಗಳಲ್ಲಿ ಜಲ್ಲಿಯನ್ನು ಹಾಕಿ ಹಾಗೆಯೇ ಬಿಟ್ಟಿರುತ್ತೀರಿ ಇದರಿಂದ ವಾಹನ ಅಪಘಾತಗಳು ಹೆಚ್ಚಾಗುತ್ತಿದೆ ಹಾಗೂ ಸಾರ್ವಜನಿಕರಿಂದ ದೂರಗಳು ಸಹ ಹೆಚ್ಚಾಗುತ್ತಿವೆ ಎಂದು ತಿಳಿಸಿದರು. ಆದ್ದರಿಂದ ಈ ಕೂಡಲೆ ರಸ್ತೆ ಅಗೆತ ಮಾಡಿರುವ ಮಣ್ಣುಗುಡ್ಡೆಗಳನ್ನು ಮೊದಲು ತೆರವುಗೊಳಿಸಿ ನಂತರ ರಸ್ತೆ ಪುನಃಸ್ಥಾಪನೆ ಮಾಡುವುಂತೆ ಸೂಚಿಸಿದರು. ಇದಕ್ಕೆ ಬೆಸ್ಕಾಂ ಗುತತ್ತಿಗೆದಾರರು ಈ ಕೂಡಲೆ ಮಣ್ಣುಗುಡ್ಡಗಳನ್ನು ತೆರವುಗೊಳಿಸಿಕೊಡುತ್ತೇವೆ ನಂತರ ರಸ್ತೆ ಪುನಃಸ್ಥಾಪನೆ ಮಾಡಿಕೊಡುತ್ತೇನೆ ಎಂದು ತಿಳಿಸಿದರು.

6. ಶ್ರೀಮತಿ ಮಹಾಲಕ್ಷ್ಮೀ ಸದಸ್ಯರು ರವರು ಅಶೋಕಪುರಂರಲ್ಲಿ ಬೋರ್‌ವೆಲ್ ಸಮಸ್ಯೆಯನ್ನು ಪರಿಹರಿಸಲು ಕೋರಿದರು. ಇದಕ್ಕೆ ಮಾನ್ಯ ಅಧ್ಯಕ್ಷರು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಗಿದೆ ಸ್ಥಳಕ್ಕೆ ಬೇಟಿ ನೀಡಿ ಸಮಸ್ಯೆಯನ್ನು ಪರಿಹರಿಸುತ್ತಾರೆ ಎಂದು ತಿಳಿಸಿದರು.

7. ಸಭೆಯಲ್ಲಿ ಹಾಜರಿದ್ದ ಸದಸ್ಯರು ಕೋವಿದ್–19 ಗೆ ಸಂಬಂಧಿಸಿದ ಮಾಹಿತಿಯನ್ನು ತಿಳಿಸುವಂತೆ ಕೋರಿದರು. ಇದಕ್ಕೆ ಹಿರಿಯ ಆರೋಗ್ಯ ಪರಿವೀಕ್ಷಕರು ಕೋವಿಡ್–19ಗೆ ಸಂಬಂಧಿಸಿದ ಮಾಹಿತಿಯನ್ನು ಸಭೆಗೆ ಓದಿ ತಿಳಿಸಿದರು.

8. ಶ್ರೀ ಪುಟ್ಟಸ್ವಾಮಿ ಸದಸ್ಯರು ರವರು ಅಂತಿಮವಾಗಿ ಸಭೆಗೆ ಹಾಜರಿದ್ದ ಸದಸ್ಯರು, ಅಧಿಕಾರಿಗಳು ಮತ್ತು ಸಾರ್ವಜನಿಕರಿಗೆ ವಂದನೆಗಳು ಹೇಳುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು.

**ಅಧ್ಯಕ್ಷರು/ಕಾರ್ಯದರ್ಶಿ**

ವಾರ್ಡ್ ಕಮಿಟಿ, ವಾರ್ಡ್.ಸಂಖ್ಯೆ.44
ಮಾರಪ್ಪನಪಾಳ್ಯ

Scanned with CamScanner